MVC.No.250/2024
PW.1

ದಿನಾಂಕ:**23.01.2026** ರಂದು ಸಾಕ್ಷಿಯನ್ನು ಮುಖ್ಯ ವಿಚಾರಣೆಗಾಗಿ ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ: ಶ್ರೀ.ಆರ್. ಬಿ. ಎಮ್. ವಕೀಲರಿಂದ.

ನಾನು ನನ್ನ ಸಾಕ್ಷಿ ವಿಚಾರಣೆಯ ಶಪಥ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಮಾಹಿತಿ ಹಾಗೂ ಸಂಗತಿ ನನಗೆ ತಿಳಿದ ಮಟ್ಟಿಗೆ ನಿಜ ಇರುತ್ತದೆ ಮತ್ತು ಸಹಿ ನನ್ನದೆ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ.

ಬಸವಕಲ್ಯಾಣ ಸಂಚಾರಿ ಪೋ.ಠಾ.ಕ್ರೈ.ನಂ.11/2024 ರಲ್ಲಿ ದಾಖಲಾದ ಪ್ರ.ವ.ವರದಿ, ದೂರು, ನನ್ನ ಹೇಳಿಕೆ, ಸ್ಥಳ ಪಂಚನಾಮೆ, ವಾಹನ ಜಪ್ತಿ ಪಂಚನಾಮೆ, ನನ್ನ ಮಗನ ಗಾಯದ ಪ್ರಮಾಣ ಪತ್ರ, ವಾಹನ ತಪಾಸಣಾ ವರದಿ, ಅಂತಿಮ ವರದಿಯ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಅನುಕ್ರಮವಾಗಿ ನಿಪಿ1 ರಿಂದ 8 ಎಂದು, ನನ್ನ ಮಗನ ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ.9 ಎಂದು, ಬ್ರಿಮ್ಸ್ ಆಸ್ಪತ್ರೆಯವರು ನೀಡಿದ ಡಿಸ್ಚಾರ್ಜ ಕಾರ್ಡನ್ನು ಹಾಜರುಪಡಿಸಿದ್ದು ಅದನ್ನು ನಿಪಿ.10 ಎಂದು, ಒಂದು ಎಕ್ಸರೇ ಬಿಲ್ಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ.11 ಎಂದು, ಒಂದು ಎಕ್ಸರೇ ವರದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.12 ಎಂದು, ಒಂದ ಎಕ್ಸರೇ ಫಿಲಮನ್ನು ಹಾಜರುಪಡಿಸಿದ್ದು ಅದನ್ನು ನಿಪಿ.13 ಎಂದು ಗುರುತಿಸಲಾಯಿತು. ವಾಹನ ಸಂ.ಕೆಎ-56/ಕೆ-8721 ನೇದ್ದರ ಆರ್. ಸಿ ಕಾಪಿ ಹಾಗೂ ವಿಮಾ ಪಾಲಿಸಿಯ ಅಟೆಸ್ಟೆಡ್ ಕಾಪಿಗಳನ್ನು ಹಾಜರುಪಡಿಸಿರುತ್ತೇನೆ. ಆದ್ದರಿಂದ ಅರ್ಜಿಯಲ್ಲಿ ಕೋರಿರುವಂತೆ ಆದೇಶಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಎದುರುದಾರ ನಂ.**2** ಇವರು ತಕರಾರು ಸಲ್ಲಿಸಿರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

(ಓ.ಹೇ.ಕೇ.ಸ.ಇದೆ)

ಹಿರಿಯ ದಿವಾಣಿ ನ್ಯಾಯಾಧೀಶರು
ಬಸವಕಲ್ಯಾಣ.

ಸಾಕ್ಷಿದಾರರ ಸಹಿ:-